# ಸುಂದರ ಕತ್ತು ಅಂದಕ್ಕೆ ಗತ್ತು

■ ಪವಿತ್ರಾ ಭಟ್



ಅಂದವಾಗಿ ಕಾಣಬೇಕು ಎಂದು ಮುಖಕ್ಕೆ ಮೇಕಪ್ ಮಾಡಿಕೊಳ್ಳುತ್ತೇವೆ. ಆದರೆ ಕೆಲವು ಸಣ್ಣ ಪುಟ್ಟ ತಪ್ಪುಗಳು ಸೌಂದರ್ಯವನ್ನು ಕೆಡಿಸಬಹುದು. ಅದರಲ್ಲಿ ಮುಖ್ಯವಾಗಿ ಕುತ್ತಿಗೆ ಅಥವಾ ಕತ್ತಿನ ಕಡೆ ಗಮನ ನೀಡದಿರುವುದು. ಮೇಕಪ್ ವೇಳೆ ಕುತ್ತಿಗೆಗೂ ಮುಖದಷ್ಟೇ ಆದ್ಯತೆ ನೀಡಬೇಕು. ಹಾಗಿದ್ದಾಗ ಮಾತ್ರ ಮುಖ ಹೆಚ್ಚು ಸುಂದರವಾಗಿ ಕಾಣಲು ಸಾಧ್ಯ. ಪ್ರತಿದಿನ ಹಾಕಿಕೊಳ್ಳುವ ಸರದಿಂದಲೋ, ಬಿಸಿಲಿನಿಂದಲೋ ಅಥವಾ ಇನ್ನಿತರ ಕಾರಣಗಳಿಂದ ಕೆಲವೊಮ್ಮೆ ಕುತ್ತಿಗೆ ಭಾಗ ಕಪ್ಪಾಗಿರುತ್ತದೆ. ಮುಖಕ್ಕೆ ಮೇಕಪ್ ಮಾಡಿ ಕುತ್ತಿಗೆಯನ್ನು ಹಾಗೇ ಬಿಟ್ಟರೆ ಅಂದಗೆಡುವುದು ನಿಶ್ಚಿತ. ಮುಖಕ್ಕೆ ಮಾಡಿದ ಮೇಕಪ್ ಅನ್ನೇ ಕುತ್ತಿಗೆವರೆಗೆ ಮಾಡುವುದರಿಂದ ಬ್ಯೂಟಿ ಹೆಚ್ಚುವುದರಲ್ಲಿ ಅನುಮಾನವಿಲ್ಲ.

## ಕುತ್ತಿಗೆಯ ಮೇಕಪ್ ಹೀಗೆ ಮಾಡಿ...

ಮೊದಲು ಕುತ್ತಿಗೆ ಭಾಗವನ್ನು ಸ್ವಚ್ಛಗೊಳಿಸಿಕೊಳ್ಳಿ. ಬಳಿಕ ಮಾಯಿಶ್ಚರೈಸರ್ ಹಚ್ಚಿ ಸ್ವಲ್ಪ ಹೊತ್ತು ಆರಲು ಬಿಡಿ. ನಂತರ ಪ್ರೈಮರ್ ಕ್ರೀಮ್ ಹಚ್ಚಿಕೊಳ್ಳಿ. ಇದು ನಿಮ್ಮ ಚರ್ಮಕ್ಕೆ ಫೌಂಡೇಶನ್ ಕ್ರೀಮ್ ಸರಿಯಾಗಿ ಕೂರಲು ಸಹಾಯ ಮಾಡುತ್ತದೆ. ಸಾಮಾನ್ಯವಾಗಿ ಕುತ್ತಿಗೆಗೆ ಲಘುವಾದ ಮೇಕಪ್ ಸಾಕಾಗಿರುವುದರಿಂದ ಲಿಕ್ವಿಡ್ ಫೌಂಡೇಶನ್ ಬಳಸಬಹುದು. ಇದು ಚರ್ಮಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತದೆ.

ಪ್ರೈಮರ್ ಮೇಲೆ ಫೌಂಡೇಶನ್ ಹಚ್ಚಿ ಚೆನ್ನಾಗಿ ಬ್ಲೆಂಡ್ ಮಾಡಿಕೊಳ್ಳಿ, ನಂತರ ಫೌಂಡೇಶನ್ ಬ್ರಷ್ ಮೂಲಕ ವೃತ್ತಾಕಾರವಾಗಿ ಕುತ್ತಿಗೆ ಭಾಗಕ್ಕೆ ಕ್ರೀಮ್ ಹಚ್ಚಿಕೊಳ್ಳಿ. ಮುಖಕ್ಕೆ ಹಚ್ಚುವಷ್ಟು ಫೌಂಡೇಶನ್ ಬೇಡ. ಕ್ರೀಮ್ ಹೆಚ್ಚಾದರೆ ದಪ್ಪ ಕಾಣಬಹುದು. ಅಗತ್ಯವಿದ್ದರೆ ಮತ್ತೊಮ್ಮೆ ಹಚ್ಚಿಕೊಳ್ಳಬಹುದು. ನಂತರ ಪೌಡರ್ ಹಚ್ಚಿ ಫೌಂಡೇಶನ್ ಕ್ರೀಮ್ ಅನ್ನು ಕೂರಿಸಿಕೊಳ್ಳಿ. ಕೊನೆಯಲ್ಲಿ ಮರೆಯದೇ ಮಾಡಬೇಕಾದುದು ಮೇಕಪ್ ಸೆಟ್.

## ಕ್ರೀಮ್ ಆಯ್ಕೆ ಸೂಕ್ತವಾಗಿರಲಿ...

ನಿಮ್ಮ ಚರ್ಮದ ಬಣ್ಣಕ್ಕೆ ಹೊಂದುವ ಹಾಗೆ ಫೌಂಡೇಶನ್ ಕ್ರೀಮ್ ಆರಿಸಿಕೊಳ್ಳಿ. ಲಿಕ್ವಿಡ್, ಕ್ರೀಮ್, ಪೌಡರ್, ಸ್ಟಿಕ್ ಹೀಗೆ ವಿವಿಧ ರೀತಿಯ ಫೌಂಡೇಶನ್ ಕ್ರೀಮ್‌ಗಳು ಲಭ್ಯವಿವೆ. ಒಣ ಚರ್ಮದವರಾಗಿದ್ದರೆ ಕ್ರೀಮ್ ಅಥವಾ ಲಿಕ್ವಿಡ್ ಫೌಂಡೇಶನ್ ಆಯ್ಕೆ ಮಾಡಿಕೊಳ್ಳುವುದು ಒಳ್ಳೆಯದು. ಎಣ್ಣೆಯುಕ್ತ ಚರ್ಮದವರಾಗಿದ್ದರೆ ಪೌಡರ್ ಅಥವಾ ಮ್ಯಾಟ್ ಫೌಂಡೇಶನ್ ಆಯ್ಕೆ ಮಾಡಿಕೊಳ್ಳಿ. ಸಾಮಾನ್ಯ ಚರ್ಮವಾಗಿದ್ದರೆ ಯಾವ ರೀತಿಯದ್ದಾದರೂ ಕ್ರೀಮ್ ಬಳಸಬಹುದು. ನೆನಪಿಡಿ, ಉತ್ತಮ ಗುಣಮಟ್ಟದ ಕ್ರೀಮ್ ಬಳಸಿ. ಕೆಲವರಿಗೆ ಕುತ್ತಿಗೆಯ ಭಾಗದಲ್ಲಿ ಹೆಚ್ಚು ಬೆವರುವುದರಿಂದ ಚರ್ಮ ಎಣ್ಣೆಯುಕ್ತ ಎನ್ನಿಸಬಹುದು. ಹೀಗಾಗಿ ಫೌಂಡೇಶನ್ ಕ್ರೀಮ್ ಆಯ್ಕೆಯಲ್ಲಿ ಎಚ್ಚರವಾಗಿರಿ.

## ಸನ್‌ಸ್ಕ್ರೀನ್ ಇರಲಿ...

ಕೆಲವು ಫೌಂಡೇಶನ್ ಕ್ರೀಮ್‌ಗಳಲ್ಲಿ ಸನ್‌ಸ್ಕ್ರೀನ್ ಕೂಡ ಇರುತ್ತದೆ. ಇದು ಸೂರ್ಯನ ಹಾನಿಕಾರಕ ಕಿರಣಗಳಿಂದ ನಿಮ್ಮ ಚರ್ಮವನ್ನು ರಕ್ಷಿಸುತ್ತದೆ. ನೀವು ಹೆಚ್ಚು ಸಮಯ ಬಿಸಿಲಿನಲ್ಲಿ ಕಳೆಯುತ್ತಿದ್ದರೆ, ಸನ್‌ಸ್ಕ್ರೀನ್ ಇರುವ ಫೌಂಡೇಶನ್ ಕ್ರೀಮ್ ಅನ್ನು ಬಳಸುವುದು ಉತ್ತಮ.

ಹೆಚ್ಚು ಕುತ್ತಿಗೆ ಭಾಗ ಕಾಣುವಂತೆ ಉಡುಪು ಧರಿಸಿದಾಗ ಮೇಕಪ್ ಪ್ರಮುಖ ಪಾತ್ರ ವಹಿಸುತ್ತದೆ. ಸೀರೆ, ಫ್ರಾಕ್‌ಗಳನ್ನು ಧರಿಸಿದಾಗ ಉಡುಪಿನಿಂದ ಹೊರಗುಳಿದ ಭಾಗವನ್ನು ಕವರ್ ಮಾಡುವುದು ಅಗತ್ಯ. ಭುಜದ ಭಾಗ, ಕುತ್ತಿಗೆ ಅಕ್ಕಪಕ್ಕದಲ್ಲಿ ಕೆಲವೊಮ್ಮೆ ನೆರಿಗೆಗಳಾಗುತ್ತವೆ. ಇದನ್ನು ಮರೆಮಾಚಲು ಮೇಕಪ್ ನೆರವಾಗುತ್ತದೆ.

## ಕುತ್ತಿಗೆ ಆರೈಕೆ ಮರೆಯದಿರಿ...

ಮುಖ ಹೊಳೆಯುವಂತೆ ಇಟ್ಟುಕೊಳ್ಳಬೇಕೆಂದು ತರಹೇವಾರಿ ಫೇಸ್‌ಪ್ಯಾಕ್ ಹಾಕುತ್ತೇವೆ. ಈ ಪ್ಯಾಕ್‌ಗಳು ಕುತ್ತಿಗೆಗೂ ಇರಲಿ. ಕುತ್ತಿಗೆಯ ಅಂದ ಮುಖ ಹೊಳಪಿನಿಂದ ಹೊಳೆಯಲು ಸಾಥ್ ನೀಡುತ್ತದೆ. ಆಗಾಗ ಕೊಬ್ಬರಿ ಎಣ್ಣೆ, ಎಳ್ಳೆಣ್ಣೆಯಿಂದ ಮಾಲಿಷ್ ಮಾಡುತ್ತಿರಿ. ಇದರಿಂದ ಚರ್ಮದ ಆರೋಗ್ಯವೂ ಉತ್ತಮವಾಗಿರುತ್ತದೆ. ಕೆಲವರಿಗೆ ಬೆಳ್ಳಿ, ಬಂಗಾರದ ಆಭರಣಗಳು ಚರ್ಮವನ್ನು ಕಂದಾಗಿಸುತ್ತವೆ. ಆದ್ದರಿಂದ ಅಂತಹವರು ಆಗಾಗ ಕುತ್ತಿಗೆಯ ಭಾಗವನ್ನು ಸ್ವಚ್ಛಗೊಳಿಸಿಕೊಳ್ಳಿ.

## ಈ ಟಿಪ್ಸ್ ಪಾಲಿಸಿ...

ಉದ್ದ ಕುತ್ತಿಗೆಯನ್ನು ಹೊಂದಿರುವವರು ಗಾಢ ಬಣ್ಣದ ಫೌಂಡೇಶನ್ ಕ್ರೀಂ ಬಳಸುವುದು ಒಳ್ಳೆಯದು. ಎಡಭಾಗದಿಂದ ಬಲಭಾಗದ ಕಡೆಗೆ ಕ್ರೀಮ್ ಹಚ್ಚಿ ಬ್ಲೆಂಡ್ ಮಾಡಿಕೊಳ್ಳಿ. ಇದರಿಂದ ಕತ್ತು ನೀಳವಾಗಿ ಕಾಣುವುದನ್ನು ತಪ್ಪಿಸಬಹುದು. ದಪ್ಪ ಕುತ್ತಿಗೆ ಇದ್ದರೆ ಮುಂಭಾಗದಲ್ಲಿ ತೆಳುವಾದ ಫೌಂಡೇಶನ್ ಹಚ್ಚಿ, ಹೈಲೈಟರ್ ಮೂಲಕ ಚರ್ಮವನ್ನು ಬ್ರೈಟ್ ಮಾಡಿಕೊಳ್ಳಿ. ಕುತ್ತಿಗೆಯ ಅಕ್ಕಪಕ್ಕದಲ್ಲಿ ಗಾಢ ಬಣ್ಣದ ಫೌಂಡೇಶನ್ ಮೂಲಕ ಬ್ಲೆಂಡ್ ಮಾಡಿಕೊಳ್ಳಿ. ಸಣ್ಣ ಅಥವಾ ಕಿರಿದಾದ ಕುತ್ತಿಗೆ ಇರುವವರು ಮುಖಕ್ಕೆ ಹಚ್ಚಿದ ಫೌಂಡೇಶನ್ ಅನ್ನೇ ತೆಳುವಾಗಿ ಹಚ್ಚಿಕೊಳ್ಳಿ. ಕೆಳಭಾಗದಿಂದ ಮೇಲ್ಭಾಗಕ್ಕೆ ಬ್ಲೆಂಡ್ ಮಾಡಿಕೊಂಡರೆ ಮುಖ ಮತ್ತು ಕತ್ತು ಆಕರ್ಷಕವಾಗಿ ಕಾಣುವಂತೆ ಮಾಡಬಹುದು. ■